ಹೊತ್ತಲ್ಲಿ ದ್ಯಾವ್ರ ಪೂಜೇಲಿ ಇರುವಷ್ಟೇ ಶ್ರದ್ಧೆ ಇರಬೇಕು, ತಿಳ್ಕ. ನೀನು ನೀರಲ್ಲಿ ಗಾಳ ಸುಣದೆ ಸುಮ್ನೆ ಕೂತೆ, ಅಂದ್ರೆ ಆಗೂದಿಲ್ಲ. ನೀ ಹಾಕಿದ ಎರೆನೋಡಿ ಮೀನುಗಳು ಪಟ್ಟನೆ ಕಚ್ತವೆ ಅಂತ ಕನಸೂ ಕಾಣಬೇಡ. ಅಂತಂಥ ಮೀನುಗಳು ನಿನ್ನ ಗಾಳ ಮೂಸುದೂ ಇಲ್ಲ. ಆದರೆ ನಿರಾಸೆ ಆಗಬೇಡ. ಅವೇ ತಿರುಗಿ ಬಂದು ತಿನ್ನೂದು ಉಂಟು. ಇಂಥ ಚಂಚಲತೆಯನ್ನೇ ನಿನ್ನ ಅದೃಷ್ಟ ಮಾಡಿಕೊ. ಗಾಳದ ಸಿಡಿ, ದಾರ ಅಲುಗಾಡುವ ನಮೂನಿಗೇ ಮೀನು ಎರೆ ಕಚ್ಚಿದ್ದು, ಬಿಟ್ಟದ್ದು ತಿಳಿವಷ್ಟು ನಿನ್ನ ಮತಿ ಸೂಕ್ಷ್ಮಗೊಳ್ಳಬೇಕು. ಏರಿ, ಕೆಂಸ, ನೊಗ್ಲಿ ಇವೆಲ್ಲ ಮಹಾ ಸೂಕ್ಷ್ಮ ಪ್ರಾಣಿಗಳು. ಅವನ್ನು ಒಲಿಸಬೇಕಾಗ್ತದೆ, ರಮಿಸಬೇಕಾಗ್ತದೆ, ವಂಚಿಸಬೇಕಾಗ್ತದೆ, ತಮ್ಮ. ಅದಕ್ಕೆಲ್ಲ ಕಂಡಾಪಟ್ಟೆ ಸಹನೆ ಬೇಕಾಗ್ತದೆ...' ಎಂದೆಲ್ಲ ಚಿಕ್ಕಪ್ಪ ಹೊಳೆನೀರಿನ ನಡುವೆ ಮತ್ಸ್ಯೋಪದೇಶಗೈದಿದ್ದ. ಅದನ್ನು ಪ್ರೀತಂ ಪಾಲಿಸಿದವನೇ!

ಆದರೆ ಇಂದು ಅಂಥ ಧ್ಯಾನ ಸಾಧ್ಯವಾಗದಿರುವುದು ಪ್ರೀತಂನಿಗೂ ಅರಿವಾಗುತ್ತಿದೆ. ಏನಾದರೂ ಮೀನು ಒಯ್ಯಲಿಲ್ಲ ಅಂದ್ರೆ ಇಸ್ಮಾಯಿಲ್ ಸಾಹೇಬರು ಅಥವಾ ಮಾಬಲೇಸ್ವರ ಸಾವ್ಕಾರರ ಎದುರು ಆಯಿ ಸಾಲಕ್ಕೆ ನಿಲ್ಲುವುದು ಅನಿವಾರ್ಯವಾಗುತ್ತದೆ. ಪದೇ ಪದೇ ಆಯಿ ಅವರೆದುರು ಕೈಯೊಡ್ಡುವುದು ಅವನಿಗೆ ಇಷ್ಟವಿಲ್ಲ. ಹೀಗಾಗಿ ತಡ ಮಾಡದೇ ನೀರಿಗಿಳಿದಿದ್ದ. ಒಂದಕ್ಕಿಂತ ಹೆಚ್ಚು ಗಾಳ ಬೀಸಿದ್ದ. ಫೀಸ್ ಕಟ್ಟಲು ದುಡ್ಡು ಕಮ್ಮಿ ಬೀಳುತ್ತದೆ ಎಂದು ಆಯಿ ಡಬ್ಬಿಯಲ್ಲಿರುವುದನ್ನು ಲೆಕ್ಕ ಹಾಕುತ್ತಾ ಹೇಳಿದ್ದಳು. ಒಂದೆರಡು ಕೆಂಸನಾದರೂ ಗಾಳಕ್ಕೆ ಸಿಕ್ಕಿದರೆ ಆಯಿ ಸಾಲ ಕೇಳೂದು ತಪ್ಪುವುದು ಎಂಬ ವಿಚಾರದಲ್ಲಿದ್ದ. ಆದರೆ ಉಂಡೆ ಗಾಳದ ದಾರವನ್ನು ಹೆಬ್ಬೆರಳು ಮತ್ತು ತೋರುಬೆರಳ ನಡುವಿಟ್ಟುಕೊಂಡ ಎಳೆಯುವ, ಸಡಿಲಿಸುವ, ಕುಣಿಸುವ ಕ್ರಿಯೆಯನ್ನು ಯಾಂತ್ರಿಕವಾಗಿಯೇ ಮಾಡುತ್ತಿದ್ದ. ನೀರೊಳಗೆ ಕಣ್ಣೆಳಿಸಿದಷ್ಟೂ ತೇಲಿ ಬರುವ ಆ ದುಪ್ಪಟ್ಟಾ ಹುಡುಗಿಯ ಮುಖ ಅವನನ್ನು ಚಂಚಲಗೊಳಿಸುತ್ತಿತ್ತು!

ದೋಣಿಯಲ್ಲಿ ಕುಳಿತು ಗಾಳಗಳನ್ನು ಸಂಭಾಳಿಸುತ್ತಿರುವಾಗಲೇ, ಆಗಾಗ ತಲೆಯೆತ್ತಿ ದಡದತ್ತ ಕಣ್ಣುಹಾಯಿಸುತ್ತಿದ್ದ. ಎದೆಗೆ ಕೋಮಲತೆ ಸೋಂಕಿಸಿ ಹೋದ ಆ ಹುಡುಗಿಯ ಹೆಸರೇನಿರಬಹುದು? ಯಾವ ಕಾಲೇಜಿನಲ್ಲಿರಬಹುದು? ಅವಳ ಭಾಷೆ ನಮ್ಕಡೆಯಂಗಿಲ್ಲ... ಯಾವ ಊರಿನವಳೋ? ಎಂಬ ಪ್ರಶ್ನೆಗಳು ಮನಸ್ಸಿನಲ್ಲಿ ತೆರೆಗಳಂತೆ ತುಳುಕಾಡುತ್ತಿದ್ದವು.

ಕಾಲೇಜಿನಲ್ಲಿ ಸಾಮಾನ್ಯವಾಗಿ ತನ್ನ ಪಾಡಿಗೆ ತಾನಿರುತ್ತಿದ್ದ ಹುಡುಗ ಪ್ರೀತಂ. ಜಾವೆಲಿನ್ ಥ್ರೋನಲ್ಲಿ ಕಾರವಾರಕ್ಕೆ ಚಾಂಪಿಯನ್ ಆದ ಮೇಲೆ ಹುಡುಗಿಯರು ಅವನತ್ತ ಆಕರ್ಷಿತರಾಗಿದ್ದು ನಿಜ. ಕಾಲೇಜಿನಲ್ಲಿ ಮಾತ್ರವಲ್ಲ, ಕಾರವಾರದ ಚಂದಚಂದ ಹುಡುಗಿಯರೂ ಇವನ ಸ್ನೇಹಕ್ಕಾಗಿ ನಾನಾತರದ ಇಶಾರೆಗಳನ್ನು ಮಾಡುತ್ತಿದ್ದರೂ ಇವನಿಗೆ ಫರಕು ಬೀಳುತ್ತಿರಲಿಲ್ಲ. ವಯಸ್ಸಿಗೆ ಮೀರಿದ ಗಾಂಭೀರ್ಯ ಮತ್ತು ಮಿತಭಾಷಿತನ ಅವನದಾಗಿತ್ತು. ಆದರೆ ಮೊದಲ ಬಾರಿಗೆ ಈ ಹುಡುಗಿ ಅವನನ್ನು ಯಾಕೋ ಬೇಚೈನುಗೊಳಿಸಿದ್ದಳು. ನಿನ್ನೆ ಅವಳನ್ನು ಟಾಗೋರ್ ಬೀಚ್ ಮೇಲೆ ಇಳಿಸಿ, ತಿರುಗುವಾಗ ಒಮ್ಮೆ ಅವಳ ಕಣ್ಣುಗಳನ್ನು ನೋಡಿದ್ದ, ಅಷ್ಟೇ! ನೇರ ಹೃದಯಕ್ಕೇ ಇಳಿದಿತ್ತು ಆ ದೃಷ್ಟಿ! ಇವನ ಕ್ಲಾಸ್‌ಮೇಟ್ ಕೆಲವರು ಹುಡುಗಿಯರ ಬಗ್ಗೆ, ಲವ್ವುಗಿವ್ವು ಬಗ್ಗೆ ಮಾತಾಡುತ್ತಿದ್ದರು. ವ್ಯಾಟ್ಸಾಪ್ ಚಾಟ್ಸ್ ತೋರಿಸುತ್ತಾ, ಅವಳು ನನ್ನ ಗರ್ಲ್‌ಫ್ರೆಂಡು, ಇವಳು ನನ್ನ ಲವ್ವರು ಎಂದೆಲ್ಲ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಅಂಥ ಪಡ್ಡೆ ವಿಷಯಗಳಿಗೆಲ್ಲ ಲಕ್ಷ ಹಾಕುತ್ತಿರಲಿಲ್ಲ. ಕೆಲವೊಮ್ಮೆ ಗೆಳೆಯರೆಲ್ಲ ಇವನ ನಿರಾಸಕ್ತಿಯನ್ನು ಅಪಹಾಸ್ಯ ಮಾಡುವಾಗ ಇವನು ಒಮ್ಮೊಮ್ಮೆ ಯೋಚಿಸಿದ್ದುಂಟು: ತನಗ್ಯಾಕೆ ಈ ಹುಡುಗೀರು ಅಥವಾ ಈ ಪ್ರೀತಿಪ್ರೇಮದ ಬಗ್ಗೆ ಅಂಥ ಸೆಳೆತವಿಲ್ಲ. ಇದು ಅಸಹಜವೇ? ಹಗಲುಗನಸು ಹಾಗಿರಲಿ, ತನಗೆ ನಿದ್ದೆಯಲ್ಲೂ ಕನಸು ಬೀಳುವುದಿಲ್ಲ, ಅದೇ ಹುಡುಗಿಯರತ್ತ ಆಕರ್ಷಿತರಾಗುವ ತನ್ನ ವಯೋಸಹಜ ಆಸೆಗಳನ್ನು ಕಮರಿಸುತ್ತಿರಬಹುದೇ? ಆದರೆ ನಿನ್ನೆ ಆ ಹುಡುಗಿಯ ದರ್ಶನ ಆದಾಗಿನಿಂದ ಮನಸ್ಸಲ್ಲಿ ಚಂಚಲತೆಯ ಭಾವ ಉಂಟಾಗಿರುವುದು ಅವನ ಗಮನಕ್ಕೆ ಬಂದದ್ದು ಸುಳ್ಳಲ್ಲ. ಈ ಹುಡುಗಿಯ ಅದಾ ಬೇರೇನೇ ಆಗಿದೆ ಅಂದುಕೊಂಡ... ಅರರೆ! 'ಅದಾ' ಅಂದೆನೇ? ಭಾಷೆ ಕೂಡ ಬದಲಾಗಿಬಿಟ್ಟಿದೆ! ಲವ್ ಆಟ್ ಫಸ್ಟ್ ಸೈಟ್ ಅಂತಾ ಎಲ್ಲೋ ಓದಿದ್ದ. ತನಗೂ ಲವ್ ಗಿವ್? ಸಾಧ್ಯವೇ ಇಲ್ಲ... ಹಸಿವು ಮತ್ತು ಪ್ರೇಮ? ಖತರ್ನಾಕ್ ಕಾಂಬಿನೇಶನ್ ಮಾರಾಯ! ಶ್ಯೆಶ್ಯೆ... ಎಂದು ತಲೆ ಅಲ್ಲಾಡಿಸಿದ... ಏನಾಶ್ಚರ್ಯ! ದಡದಲ್ಲಿ ಅದೇ ಹುಡುಗಿ! ತನ್ನ ಈವರೆಗಿನ ಸ್ವಗತಗಳನ್ನೆಲ್ಲ ಕೇಳಿಸಿಕೊಂಡವಳಂತೆ ನಗುತ್ತಾ ನಿಂತಿದ್ದಾಳೆ!

ದೋಣಿಯಿಂದ ದಡಕ್ಕೆ ಹೇಗೇ ಗೆರೆ ಎಳೆದರೂ ಅದು ಸರಳರೇಖೆಯೇ ಆಗುತ್ತದೆ. ಗಾಳಗಳನ್ನು ಮೇಲೆಳೆದು, ಹುರಿಗಟ್ಟಿದ ಬಾಹುಗಳಿಂದ ಹುಟ್ಟು ಹಾಕುತ್ತಾ ಬಿಟ್ಟ ಬಾಣದಂತೆ ಪಾತಿದೋಣಿ ನಡೆಸಿದ. ಹತ್ತಿರ ಬಂದಂತೆ ಹುಟ್ಟಿನಿಂದ ನೀರು ತಡೆದು ವೇಗ ನಿಯಂತ್ರಿಸಿದ. ಪಾತಿದೋಣಿ ಅವಳ ಪಾದ ಸ್ಪರ್ಶಿಸುವ ರೀತಿಯಲ್ಲಿ ದಡ ತಲುಪಿತು. 'ಹಾಯ್' ಅಂದಳು. ಇವನು ಮಾತು ಮರೆತಿದ್ದ. 'ಹಲೋ' ಅಂದು ನಕ್ಕಳು. ಸಂಜೆಯ ಬೆಳಕನ್ನು ನಗುವಿನಲ್ಲೇ ಹಿಡಿದಿಟ್ಟುಕೊಂಡಂಥ ನಗುವದು. ಸ್ವಲ್ಪ ನಾಟಕೀಯವಾಗಿ 'ಕಡಲು ತೀರದ ಹುಡುಗನ ಹೆಸರು ಪ್ರೀತಂ ಅಂತ ಗೊತ್ತಾತು' ಅಂದಳು. 'ಮತ್ತೆ, ಈ ಅಪರಿಚಿತ ಹುಡುಗಿಗೆ ಅದು ಹ್ಯಾಗ್ ತಿಳೀತು ಅಂತ ಸರ್‌ಪ್ರೈಸ್ ಆಗಬ್ಯಾಡ, ಅಥ್ವಾ ತಾನು ವರ್ಲ್ಡ್ ಫೇಮಸ್ಸು ಅಂತಾನೂ ತಿಳ್ಕೋಬ್ಯಾಡ... ಬೇಲಿಗೆ ಚಾಚಿದ ನಿನ್ನ ಲಟಾರಿ ಸೈಕಲ್ ಮ್ಯಾಲ 'ಪ್ರೀತಂ, ಡಿಪ್ಲೊಮೋ 2' ಅಂತ ಪೇಂಟಲ್ಲಿ ಬರೆದದ್ದು ಇಂದು ಕಣ್ಣಿಗ್ ಬಿತ್ತು' ಎಂದು ಕಿಲಕಿಲ ನಕ್ಕಳು. ಅವಳು ನಕ್ಕಷ್ಟೂ ಅಲ್ಲಿ ಬೆಳಕು ಹೆಚ್ಚುತ್ತಿತ್ತು. ಮುಸ್ಸಂಜೆ ಕೂಡ ಕುತೂಹಲದಿಂದ ದಿನದ ವಿದಾಯವನ್ನು ವಿಳಂಬಿಸುತ್ತಿರುವಂತಿತ್ತು. 'ನನ್ನ ಹೆಸ್ರು ಸುಮಾ... ಎಲ್ರೂ ಸುಮಿ ಸುಮಿ ಅಂತಾರ. ನೀನೂ ಅನ್ನಬಹುದು... ನಾನು ಬಯಲುಸೀಮೆ ಕಡೆಯವಳ ಅದೀನಿ. ಗುಲ್ಬರ್ಗಾ ನಮ್ಮೂರು' ಅಂದಳು. 'ನಿನ್ನೆ ಥ್ಯಾಂಕ್ಸ್ ಹೇಳೋಕೆ ಮರೆತೆ, ನೀನು ನಂಗಿಷ್ಟ ಆದಿ' ಅಂದಳು. 'ಫ್ರೆಂಡ್ಸ್?' ಎಂದು ಕೇಳಿದಳು. 'ಓಕೆ, ಫ್ರೆಂಡ್ಸ್' ಅಂದ. ಅದೂ ಹೇಗೇಗೋ! 'ಫ್ರೆಂಡ್ಸ್ ಫಾರೆವರ್' ಎಂದು ಶೇಕ್ ಹ್ಯಾಂಡ್ ಮಾಡಲು ಕೈ ಮುಂದೆ ಮಾಡಿದಳು. ಪ್ರೀತಂ ತುಸು ಅನುಮಾನಿಸಿದ. ಕೆಲವೇ ನಿಮಿಷಗಳ ಹಿಂದೆ ಏರಿ ಮೀನಿನ ಬಾಯಿ ಅಗಲಿಸಿ ಗಾಳದಿಂದ ಬಿಡಿಸುವಾಗ ಅಂಟಿದ ಮೀನಿನ ಗಂಧ ಹಾಗೇ ಇತ್ತು. 'ಕೈ ಮುಟ್ಟಿ ಶಾಕ್ ಹೊಡೆಸಿಕೊಳ್ಳಲೇ' ಎಂದಳು. ಅವನ ಕೈಗಳನ್ನು ತಾನೇ ಎಳೆದು ಕೈಕುಲುಕಿದಳು. ಅವರ ಸ್ಪರ್ಶಕ್ಕೆ ನದಿಯೂ ಕಂಪಿಸಿ ಕಿರು ಅಲೆಗಳೇಳುತಿವೆ ಅನಿಸುವಂತಿತ್ತು.

'ದೋಣೆಲಿ ಬರ್ಲ್ಯಾ?' ಎಂದು ಪಾತಿ ಹತ್ತಿ ಕೂತಳು. ಹುಟ್ಟನ್ನು ಸುಮ್ಮನೇ ನೀರಲ್ಲಿ ಆಡಿಸಿದಳು. ಪಾತಿಯಲ್ಲಿ ಕಣ್ಣು ತೆರೆದು ಒರಗಿದ್ದ ಮೀನೊಂದನ್ನು ಹಗುರವಾಗಿ ಸ್ಪರ್ಶಿಸಿದಳು. ಅವಳ ಸ್ಪರ್ಶಕ್ಕೆ ಅದು ಮಿಸುಕಾಡಿ ನೀರಿಗೆ ನೆಗೆಯಿತು. ಪುಳಕ್ಕನೇ ನೀರೊಳಗೆ ಕಣ್ಮರೆಯಾಯಿತು. ಆ ಆಕಸ್ಮಿಕದಿಂದ ಸ್ವಲ್ಪ ದಂಗಾದರೂ ಇಬ್ಬರೂ ಜೋರಾಗಿ ನಕ್ಕರು. ಅದು ನದಿಯಲ್ಲಿ ಚಲಿಸಿ ದೇವಭಾಗದಲ್ಲಿ ಪ್ರತಿಧ್ವನಿಸಿತು. 'ಮೀನಿಗೆ ಮತ್ತೆ ಜೀವ ಬಂತಲ್ಲೋ?' ಎಂದಳು. 'ನಿನ್ನ ಟಚ್ಚಲಿ ಏನೋ ಮ್ಯಾಜಿಕ್ ಇರಬೇಕು' ಎಂದ ನಗುತ್ತಾ. 'ಓ ಪರವಾಗಿಲ್ಲ, ಹುಡುಗನಿಗೆ ಮೈಚಳಿ ಹೋಯ್ತು. ಈಗ ಮಾತಾಡಬಹುದು' ಅಂದಳು. ಮಾತು ಅವರನ್ನು ಹತ್ತಿರ ಮಾಡುತ್ತಿತ್ತು. ಸುಮಿ ಕಾಳಿ, ಕಡಲು, ಸ್ಯಾಂಡು, ಸನ್ಸೆಟ್ಟು ಬಗ್ಗೆ ಮಾತಾಡಿದಳು. ಸುಮಿಯ ವರ್ಣನೆಯು ಪ್ರೀತಂ ನಿತ್ಯ ಕಾಣುತ್ತಿದ್ದ ಜೀವಿಸುತ್ತಿದ್ದ ಈ ದೃಶ್ಯಗಳಲ್ಲಿ ಹೊಸತನದ ಸಿಂಚನವಾಗುತ್ತಿತ್ತು. ಸುಮಿಯ ಹಾಗೆ ಅವನೆಂದೂ ಇದನ್ನೆಲ್ಲ ವಿಸ್ಮಯದ ಕಣ್ಣುಗಳಿಂದ ನೋಡಿರಲಿಲ್ಲ.

ಅವಳ ಮಾತಿನ ಸಡಗರ, ನಗುವಿನ ಬೆರಗು ಪ್ರೀತಂನನ್ನು ಚುಂಬಕದಂತೆ ಸೆಳೆಯುತ್ತಿದ್ದವು. ಅವನಿಗೆ ಅವಸರವಿತ್ತು, ಅದರ ಅರಿವೂ ಇತ್ತು. ಇಂಥ ಅವಕಾಶ ಬಿಟ್ಟು ಹೋಗಲೂ ಮನಸಿರಲಿಲ್ಲ. ಆದರೆ ಆಕೆಗೂ ಲೇಟ್ ಆಗುತ್ತದೆ, ಒಬ್ಬಳೇ ಕತ್ತಲಲ್ಲಿ ಮರಳುವುದು ಸರಿಯಲ್ಲ ಎಂದು 'ನಾಳೆ ಸಿಗೋಣ?' ಅಂದ. ಅವಳು 'ದಿನಾ ಸಿಗೋಣ' ಅಂದಳು. ಅವನು ನಕ್ಕು ಪಾತಿಯನ್ನು ಆಳ ನೀರಿಗೆ ತಿರುಗಿಸಿದ. ಗೋವಾ ಬನಿಯನ್ನು, ಬರ್ಮುಡಾ ಚಡ್ಡಿ ತಲೆಗೊಂದು ಕ್ಯಾಪ್ ಧರಿಸಿದ ಹುಡುಗನ ಆಕೃತಿ ಕಣ್ಣು ತುಂಬಿಕೊಳ್ಳುತ್ತ ಆಕೆ ಇನ್ನೂ ದಡದಲ್ಲೆ ನಿಂತಿದ್ದಳು. 'ವ್ಹಾಯ್, ಕತ್ತಲಾಗ್ತಿದೆ, ಇಂದು ನಿನ್ನ ಸೈಕಲ್ ಮ್ಯಾನೆ ಬಿಡೂಕೆ ಆಗೂದಿಲ್ಲ. ನಂಗೆ ಮೀನ್ ಹಿಡಿಯುಕುಂಟು, ಆಯ್ತಾ' ಅಂದ. 'ಲೇ, ಇಂದು ಹೈವೇ ಮೇಲಿಂದ ಹಾಯಿಸಿ ಬಂದೀನಿ. ಸ್ಕೂಟಿಯನ್ನು ಇಲ್ಲೇ ಬ್ರಿಡ್ಜ್ ಕೆಳಗೆ ನಿಲ್ಸಿನಿ...' ಅಂದಳು. 'ಹುಶಾರಿ ಹುಡುಗಿ ಹಾಂ' ಅಂದ.